# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| **ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ** | **502 (554)** |
| **ಮಾನ್ಯ ಸದಸ್ಯರ ಹೆಸರು** | **ಶ್ರೀ ಯು. ಬಿ. ವೆಂಕಟೇಶ್ (ನಾಮ ನಿರ್ದೇಶನ ಹೊಂದಿದವರು)** |
| **ಉತ್ತರಿಸಬೇಕಾದ ದಿನಾಂಕ** | **08.12.2023** |
| **ಉತ್ತರಿಸುವ ಸಚಿವರು** | **ಮಾನ್ಯ ಹಿಂದುಳಿದ ವರ್ಗಗಳ ಕಲ್ಯಾಣ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು** |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| **ಅ)** | ಕರ್ನಾಟಕ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಸೇವಾ (ವೃಂದ ಮತ್ತು ನೇಮಕಾತಿ) ರದ್ದುಗೊಂಡಿರುವ ನಿಲಯ ಪಾಲಕರ ಹುದ್ದೆಗಳಿಗೆ ಮುಂಬಡ್ತಿಯನ್ನು ನೀಡಲಾಗಿದೆಯೇ; | ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಗೆ ಒಟ್ಟು 384 ನಿಲಯ ಪಾಲಕರ ಹುದ್ದೆಗಳು ಮಂಜೂರಾಗಿರುತ್ತವೆ. ಇಲಾಖೆಯ ವೃಂದ ಮತ್ತು ನೇಮಕಾತಿ ನಿಯಮಗಳು 2019 ರನ್ವಯ ಸದರಿ ನಿಲಯ ಪಾಲಕರ ಹುದ್ದೆಗಳ ವೇತನ ಶ್ರೇಣಿಯನ್ನು ಕೆಳ ದರ್ಜೆಗೆ ಇಳಿಸಲಾಗಿರುತ್ತದೆ.<br>ಮಂಜೂರಾಗಿದ್ದ 384 ನಿಲಯ ಪಾಲಕರ ಹುದ್ದೆಗಳಲ್ಲಿ ದಿನಾಂಕ: 29.09.2019 ರ ಅಂತ್ಯಕ್ಕೆ ಖಾಲಿ ಇದ್ದ 313 ಹುದ್ದೆಗಳಿಗೆ ಪದೋನ್ನತಿ ನೀಡಬಹುದೆಂದು ಸರ್ಕಾರದ ಆದೇಶ ಸಂಖ್ಯೆ: ಹಿಂವಕ 92 ಬಿಇಟಿ 2023, ದಿನಾಂಕ: 21.07.2023 ರಲ್ಲಿ ತಿಳಿಸಲಾಗಿದೆ. ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಆಯುಕ್ತಾಲಯದ ಅಧಿಕೃತ ಜ್ಞಾಪನ ಸಂಖ್ಯೆ.BCWD-1105/10/2022/BCWD_ADMN<br>Dated:25/07/2023 ರಲ್ಲಿ ಪದೋನ್ನತಿ ನೀಡಲಾಗಿದೆ. |
| **ಆ)** | ಹಾಗಿದ್ದಲ್ಲಿ, ಮುಂಬಡ್ತಿ ಸಮಯದಲ್ಲಿ (ವೃಂದ ಮತ್ತು ನೇಮಕಾತಿ ನಿಯಮಗಳಿಗೆ ತಿದ್ದುಪಡಿಯನ್ನು ತರಲಾಗಿದೆಯೇ? (ಸಂಪೂರ್ಣ ವಿವರವನ್ನು ಒದಗಿಸುವುದು) | ವೃಂದ ಮತ್ತು ನೇಮಕಾತಿ ನಿಯಮಗಳಿಗೆ ತಿದ್ದುಪಡಿ ಮಾಡಿರುವುದಿಲ್ಲ. ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯಲ್ಲಿ ನಿಯಮಾನುಸಾರ ಮುಂಬಡ್ತಿಗೆ ಅರ್ಹರಿದ್ದು ಯಾವುದೇ ಮುಂಬಡ್ತಿ ಇಲ್ಲದೇ ನಿರಂತರವಾಗಿ 20 ವರ್ಷಗಳು ಒಂದೇ ಹುದ್ದೆಯಲ್ಲಿ ಸೇವೆ ಸಲ್ಲಿಸಿ, 2019ರಲ್ಲಿ ವೃಂದ ಮತ್ತು ನೇಮಕಾತಿ ನಿಯಮಗಳ ಪರಿಷ್ಕರಣೆಯ ಪೂರ್ವದಲ್ಲಿಯೇ ಖಾಲಿ ಇದ್ದ ಹುದ್ದೆಗಳಿಗೆ ಮತ್ತು ಪದೋನ್ನತಿಗೆ ಅರ್ಹರಿದ್ದ ನೌಕರರಿಗೆ, ನ್ಯಾಯಯುತವಾಗಿ ದೊರಕಬೇಕಾಗಿದ್ದ ಮುಂಬಡ್ತಿಯಿಂದ ವಂಚಿತರಾಗಿದ್ದುದರಿಂದ ಇಲಾಖೆಯ ವಿದ್ಯಾರ್ಥಿ ನಿಲಯಗಳ ಸುಗಮ ಆಡಳಿತ ನಿರ್ವಹಣೆಯ ಹಿತದೃಷ್ಟಿಯಿಂದ ನಿಲಯ ಪಾಲಕರ ಹುದ್ದೆಗಳಿಗೆ ಒಂದು ಬಾರಿಯ ಕ್ರಮವಾಗಿ ಮಾತ್ರ ಅರ್ಹ ನೌಕರರಿಗೆ ಪದೋನ್ನತಿ ನೀಡಲಾಗಿರುತ್ತದೆ. |

**ಸಂಖ್ಯೆ:ಹಿಂವಕ 378 ಬಿಇಟಿ 2023**

**(ಶಿವರಾಜ ಎಸ್. ತಂಗಡಗಿ)**
**ಹಿಂದುಳಿದ ವರ್ಗಗಳ ಕಲ್ಯಾಣ ಹಾಗೂ**
**ಕನ್ನಡ ಮತ್ತು ಸಂಸ್ಕೃತಿ ಸಚಿವರು**